

# ಕಲೆ, ವ್ಯಾಪಾರ, ಭಕ್ತಿ, ಪಾಪಪ್ರಜ್ಞೆ, ನೈತಿಕತೆಯ ವರ್ತುಲದಲ್ಲಿ...

ಕಾಮಾಟಿಪುರಕ್ಕೆ ಭೇಟಿ ನೀಡಿದ ನಂತರ ತಲ್ಲಣಿಸಿಹೋದ ಆಸ್ಕರ್ ವೈಲ್ಡ್, ಡಾ. ಮನೋರಂಜನಿ ಅವರೊಂದಿಗೆ ಮಾತನಾಡಿ ತನ್ನ ತುಮುಲ ಹಗುರವಾಗಿಸಿಕೊಳ್ಳಲು ಮುಂದಾದ. ಡಾ. ಮನೋರಂಜಿನಿ ಮಾತು ಮುಂದುವರಿಸಿದ್ದರು. ‘ಇಷ್ಟೆಲ್ಲ ನಾನು ಏಕೆ ಹೇಳುತ್ತಿರುವೆನೆಂದರೆ, ನೀನು ವೃಥಾ ಬೇಡದ ವಿಚಾರಗಳನ್ನು ತಲೆಗೆ ತುಂಬಿಕೊಳ್ಳಬಾರದೆಂಬುದನ್ನು ತಿಳಿಸಲು. ಈ ಮುಂಬಯಿಯಲ್ಲೇ ಅಲ್ಲ, ಒಂದು ಸಣ್ಣ ಹಳ್ಳಿಯಲ್ಲೂ ಜನರಿಗೆ ತಾವೇಕೆ ಹುಟ್ಟುತ್ತೇವೆ, ಬದುಕುತ್ತೇವೆ ಮತ್ತು ಸಾಯುತ್ತೇವೆ ಎಂಬುದರ ಬಗ್ಗೆ ಸ್ಪಷ್ಟ ಅರಿವಿರುವುದಿಲ್ಲ. ಮತ್ತು ತಾವು ಈ ಭೂಮಿಯ ಮೇಲೆ ಯಾವುದೋ ಕಾರಣಕ್ಕೆ ಸೃಷ್ಟಿಯಾಗಿ ಕಡೆಗೆ ವಿನಾಶ ಹೊಂದುವ ಒಂದು ಯಃಕಶ್ಚಿತ್ ಅಂಶ ಎನ್ನುವ ವಿಷಯವೆಂಬುದು ಸಹ ಮನದಟ್ಟಾಗಿರುವುದಿಲ್ಲ. ನಾನು ಹೇಳುತ್ತಿರುವ ಈ ಎಲ್ಲಾ ಸಂಗತಿಗಳೂ ಮೆದುಳಿನ ಎಚ್ಚರಿಕೆಯ ಸ್ಥಿತಿಸ್ಥಾಪಕತ್ವ ಮಾತ್ರವೇ ಆಗಿದೆ...’ ಮನೋರಂಜನಿಯವರ ಮಾತುಗಳನ್ನು ಆಲಿಸುತ್ತಲೇ ಮಂಪರು ಆವರಿಸಿ ಆಸ್ಕರ್ ವೈಲ್ಡ್ ಗಾಢ ನಿದ್ದೆಗೆ ಜಾರಿಬಿಟ್ಟಿದ್ದ.

ಮಾರನೆಯ ದಿನ ತಾನು ಧಾರಾವಿಗೆ ಹೋಗಬೇಕೆಂದಿದ್ದ ಪ್ರೋಗ್ರಾಂ ಕ್ಯಾನ್ಸಲ್ ಮಾಡಿದ. ಸೋಫಿಯಾ ಕಾಲೇಜಿಗೆ ಸೇರಿ ಬಿ.ಎ. ಇಂಗ್ಲಿಷ್ ಆನರ್ಸ್ ಆಯ್ಕೆ ಮಾಡಿಕೊಂಡ. ಅವನ ಈ ಆಯ್ಕೆ ಮನೆಯಲ್ಲಿ ಎಲ್ಲರಿಗೂ ಒಂದಿಷ್ಟು ಬೇಸರವನ್ನು ಉಂಟುಮಾಡಿತ್ತು. ಮ್ಯಾಥ್ಸ್ ಮತ್ತು ಸೈನ್ಸ್ ಸಬ್ಜೆಕ್ಟುಗಳಲ್ಲಿ ಆಸ್ಕರ್ ವೈಲ್ಡ್ ತುಂಬಾನೆ ಮುಂದಿದ್ದು ಮಾರ್ಕ್ಸ್ ಪಡೆಯುವುದರಲ್ಲಿ ಇಡೀ ತರಗತಿಗೆ ಮೊದಲನೆಯವನು ಕೂಡ ಆಗಿದ್ದ. ತಾತ ಗುನ್ನಾಲಾಲ್ ತನ್ನ ಮೊಮ್ಮಗನನ್ನು ಟೆಕ್ಸ್‌ಟೈಲ್ ಎಂಜಿನಿಯರಿಂಗ್‌ನಲ್ಲಿ ಎಂ.ಎಸ್. ಮಾಡಿಸಬೇಕೆಂಬ ಆಸೆಯಿಟ್ಟುಕೊಂಡಿದ್ದ. ಅಪ್ಪ ಭವರ್ ಲಾಲನಿಗೆ ತನ್ನ ಮಗನನ್ನು ಎಂ.ಕಾಂ. ಮಾಡಿಸಿ ನಂತರ ಸಿ.ಎ. ಪಾಸು ಮಾಡಿಸಿ ತಮ್ಮದೇ ಕಂಪನಿಯ ಸಿಇಒ ಮಾಡಬೇಕೆಂಬ ಬಲವಾದ ಅಪೇಕ್ಷೆಯಿತ್ತು. ಇನ್ನು ಆಸ್ಕರ್ ವೈಲ್ಡನ ತಾಯಿ ಮತ್ತು ಅಜ್ಜಿಯವರಿಗೆ ಅವನನ್ನು ಡಾಕ್ಟರ್ ಓದಿಸಿ ಹಾರ್ಟ್ ಸರ್ಜನ್ ಮಾಡಿಸಬೇಕೆಂಬ ಬಯಕೆಯಿತ್ತು. ಇದಕ್ಕೆ ಕಾರಣವೆಂದರೆ, ಆಸ್ಕರ್ ವೈಲ್ಡನ ಅಜ್ಜಿಯ ಅಪ್ಪ ಮತ್ತು ಅಮ್ಮನ ಅಪ್ಪ ಇಬ್ಬರೂ ಹೃದಯಾಘಾತದಿಂದಾಗಿ ಮೃತಪಟ್ಟಿದ್ದರು. ಆದರೆ ಆಸ್ಕರ್ ವೈಲ್ಡನ ಆಯ್ಕೆಯನ್ನು ಯಾರೂ ಪ್ರಶ್ನಿಸಲಿಲ್ಲ. ತಾತ ಗುನ್ನಾಲಾಲನಿಗೆ ಹೇಳಿ ತನ್ನ ರೂಮಿನಲ್ಲಿ ಸುಸಜ್ಜಿತ ಲೈಬ್ರರಿಯನ್ನು ರೆಡಿ ಮಾಡಿಸಿಕೊಂಡನಲ್ಲದೆ – ಇಂಗ್ಲಿಷ್ ಸಾಹಿತ್ಯದ ಪುಸ್ತಕಗಳಲ್ಲದೆ ಇತಿಹಾಸ, ಸಮಾಜಶಾಸ್ತ್ರ, ತತ್ವಶಾಸ್ತ್ರಕ್ಕೆ ಸಂಬಂಧಿಸಿದಂತೆ ಅನೇಕ ಪುಸ್ತಕಗಳನ್ನು ಸಂಗ್ರಹಿಸಿದ. ಕಾಲೇಜು ಬಿಟ್ಟರೆ ಲೈಬ್ರರಿಯಲ್ಲಿ ಕುಳಿತು ಪುಸ್ತಕ ಓದುವುದರಲ್ಲಿ, ಸಂಗೀತ ಕೇಳುವುದರಲ್ಲಿ, ಸಿನಿಮಾ ನೋಡುವುದರಲ್ಲಿ ತಲ್ಲೀನನಾಗಿಬಿಡುತ್ತಿದ್ದ. ಕೆಲವೊಮ್ಮೆ ಗೆಳೆಯರೊಂದಿಗೆ ಥಿಯೇಟರುಗಳಿಗೆ ಹೋಗಿ ಸಿನಿಮಾ ನೋಡಿ ಬರುತ್ತಿದ್ದ. ಹೀಗಾಗಿ ಇಂಗ್ಲಿಷ್ ಬಿ.ಎ. ಆನರ್ಸ್‌ನಲ್ಲಿ ಪ್ರತಿವರ್ಷ ಮೊದಲನೆಯವನಾಗಿ ತೇರ್ಗಡೆಯಾಗುತ್ತಿದ್ದವನು, ಇಂಗ್ಲಿಷ್ ಎಂ.ಎ. ತರಗತಿಯಲ್ಲಿ ಮುಂಬಯಿ ಯೂನಿವರ್ಸಿಟಿಗೇ ಮೊದಲನೆಯವನಾಗಿ ತೇರ್ಗಡೆಯಾಗಿದ್ದ. ಆ ಪ್ರಯುಕ್ತ ಗುನ್ನಾಲಾಲ್ ತನ್ನ ಮನೆಯಲ್ಲಿ ಪಾರ್ಟಿಯನ್ನು ಏರ್ಪಡಿಸಿದ್ದ.

ಆಸ್ಕರ್ ವೈಲ್ಡ್ ಇಂಗ್ಲಿಷ್ ಲಿಟರೇಚರ್‌ನಲ್ಲಿ ಮುಂಬಯಿ ಯೂನಿವರ್ಸಿಟಿಗೆ ಮೊದಲನೆಯದಾಗಿ ಪಾಸಾಗಿದ್ದೇನೂ ತಂದೆ ಭವರ್ ಲಾಲನಿಗೆ ಅಂಥ ಸಂಭ್ರಮವೇನೂ ಆಗಿರಲಿಲ್ಲ. ಪಾರ್ಟಿಯಲ್ಲಿ ವೀಸಿಯವರು ಆಸ್ಕರ್ ವೈಲ್ಡನನ್ನು ಪಿಎಚ್.ಡಿ. ಮಾಡುವಂತೆ ಪ್ರೇರೇಪಿಸಿದ್ದು ಭವರ್ ಲಾಲನಿಗೆ ವಿಪರೀತವಾದ ಬೇಸರವನ್ನು ತರಿಸಿದ್ದರೂ ಅದನ್ನವನು ತೋರ್ಪಡಿಸಿರಲಿಲ್ಲ. ಭವರ್ ಲಾಲನಿಗೆ ಸ್ವಲ್ಪ ಹೆಚ್ಚೇ ಎನಿಸುವಷ್ಟು ಸಂಯಮ ಶಕ್ತಿ ಚಿಕ್ಕಂದಿನಿಂದಲೂ ಬೆಳೆದು ಬಂದಿತ್ತು. ತನ್ನ ತಂದೆಯ ಮಾತಿಗೆ ಬದಲು ಹೇಳಿದ್ದೇ ಅಪರೂಪ ಅವನು. ವ್ಯಾಪಾರಕ್ಕೆ ಸಂಬಂಧಿಸಿದಂತೆ ತನ್ನ ಅಭಿಪ್ರಾಯಗಳನ್ನು ಬಹಳ ಸಮಾಧಾನವಾಗಿ ತಂದೆಗೆ ತೃಪ್ತಿಯಾಗುವಂತೆ ಮಂಡಿಸುತ್ತಿದ್ದ. ಭವರ್ ಲಾಲನ ನಡವಳಿಕೆಗಳು ಕುಟುಂಬದಲ್ಲಿಯೇ ಅಲ್ಲದೆ ಬಿಸಿನೆಸ್ ಸರ್ಕಲ್, ಫ್ರೆಂಡ್ಸ್ ಸರ್ಕಲ್, ಸೋಷಿಯಲ್ ಲೈಫ್ ಹೀಗೆ ಎಲ್ಲಾ ಕಡೆಯೂ ಅಪಾರವಾದ ಮೆಚ್ಚುಗೆಯನ್ನು